ತಮಿಳುನಾಡಿಗೆ ಕಬ್ಬು ಸರಬರಾಜು ಮಾಡುವ ಬಗ್ಗೆ

೩೪೨ (೩೮೪) ಶ್ರೀ ಜಿ. ಮಾದೇಗೌಡ.—ಮಾನ್ಯ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ಎರಡು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಿಂದ ತಮಿಳುನಾಡಿಗೆ ಪೂರೈಸಿದ ಕಬ್ಬಿನ ಪ್ರಮಾಣವೆಷ್ಟು ?

ಆ) ತಮಿಳುನಾಡಿಗೆ ಕಬ್ಬನ್ನು ಪೂರೈಕೆ ಮಾಡಲು ಪರವಾನಿಗೆ ಕೊಡಲು ಕಾರಣವೇನು ?

ಇ) ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ಲಭ್ಯವಿಲ್ಲದೆ ಕಬ್ಬು ನುರಿಸುವ ಕಾರ್ಯವನ್ನು ನಿಲ್ಲಿಸಿರುವುದು ಎಂಬ ಅಂಶವೇ ನಿಜವೇ ?

ಶ್ರೀ ವೀರಣ್ಣ (ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು).—

ಅ) ಕಳೆದ ಎರಡು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಿಂದ ತಮಿಳುನಾಡಿಗೆ ೧,೭೫,೦೦೦ ಮೆಟ್ರಿಕ್ ಟನ್‌ಗಳಷ್ಟು ಕಬ್ಬನ್ನು ಪೂರೈಕೆ ಮಾಡಲಾಗಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ೩೦,೬೬೬ ಹೆಕ್ಟೇರುಗಳಲ್ಲಿ ೩೦,೬೬,೬೦೦ ಮೆಟ್ರಿಕ್ ಟನ್ ಕಬ್ಬು ಬೆಳೆಯ ಅಂದಾಜು ಮಾಡಲಾಗಿತ್ತು. ಅಲ್ಲಿನ ಎಲ್ಲ ಸಕ್ಕರೆ ಹಾಗೂ ಬೆಲ್ಲ ಉತ್ಪಾದಿಸುವ ಘಟಕಗಳಿಗೆ ಕಾದಿರಿಸಿದ ಕಬ್ಬಿನ ಪ್ರಮಾಣಕ್ಕಿಂತ ಅವುಗಳು ಕಡಿಮೆ ಕಬ್ಬನ್ನು ನುರಿಸಿದ ಕಾರಣ ಇನ್ನೂ ನುರಿಸಬೇಕಾದ ಕಬ್ಬು ಉಳಿಯುತ್ತಲ್ಲದೆ. ಕಡಿಮೆ ಇಳುವರಿ ಕಾರಣ ಇವುಗಳು ಕಬ್ಬು ನುರಿಸುವಿಕೆಯನ್ನು ಅವಧಿ ಮುಂದಾಗಿ ನಿಲ್ಲಿಸಿದ ಕಾರಣ ಹಾಗೂ ಇನ್ನೂ ಸಾಕಷ್ಟು ಕಬ್ಬು ಲಭ್ಯವಿದ್ದ ಕಾರಣ ಸರ್ಕಾರವು ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ತಮಿಳುನಾಡಿನ ಸಕ್ಕರೆ ಕಾರ್ಖಾನೆಗಳು ಮಂಡ್ಯ ಜಿಲ್ಲೆಯಿಂದ ಕಬ್ಬನ್ನು ಪಡೆಯಲು ಪರವಾನಿಗೆ ನೀಡಿದ್ದಿತು.

ಇ) ಇಲ್ಲ.

ವಿದ್ಯುತ್ ಶೇವಣಿಯಿಂದ ತೊಂದರೆ

೩೪೩ (೬೩೮) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಗಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ವಿದ್ಯುತ್ ಗ್ರಾಹಕರಿಗೆ ೧೦೦ ರಿಂದ ಒಂದು ಸಾವಿರದವರೆಗೆ ಶೇವಣಿ ಸಂಗ್ರಹಕ್ಕೆ ಪ್ರಾರಂಭಿಸಿದ್ದು ನಿಜವಲ್ಲವೆ ?

ಆ) ಇದರಿಂದಾಗಿ ವಿದ್ಯುತ್ ಗ್ರಾಹಕರಿಗೆ ತೊಂದರೆಯಾಗಿ ಶೇವಣಿ ವಸೂಲಾತಿಯನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ಭಿನ್ನವಿಸಿಕೊಂಡಿರುವುದಿಲ್ಲವೆ ?

ಇ) ಗ್ರಾಹಕರಿಗೆ ಭಾರಿ ಹೊರೆಯಾಗಿರುವ ಈ ಶೇವಣಾತಿ ಆದೇಶವನ್ನು ಶೀಘ್ರ ವಾಪಸ್ಸು ಪಡೆದುಕೊಳ್ಳಲಾಗುವುದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ರಾಜ್ಯಾದ್ಯಂತ ಎಲ್ಲಾ ವಿದ್ಯುತ್ ಗ್ರಾಹಕರಿಂದ ಭದ್ರತಾ ಶೇವಣಿ ಸಂಗ್ರಹಿಸಲಾಗುತ್ತಿದೆ. ಇದು ಹಿಂದಿನಿಂದಲೂ ನಡೆದು ಬಂದಿರುವ ಕ್ರಮ ಹೊಸದಲ್ಲಾ.

ಆ) ಮುಂಗಡವಾಗಿ ಒದಗಿಸಿದ ಪ್ರತಿ ತಿಂಗಳ ವಿದ್ಯುತ್ ದರವನ್ನು ಪಾವತಿ ಮಾಡಲು ಗ್ರಾಹಕರಿಗೆ ಅವರ ಮುಂದಿನ ತಿಂಗಳ ೫ನೇ ವಾರದ ಅಂತ್ಯದವರೆಗೆ ಕಾಲಾವಕಾಶ ಇದೆ. ಹೀಗೆ ಮುಂಗಡವಾಗಿ ಒದಗಿಸಿದ ವಿದ್ಯುತ್ ದರದ ಪಾವತಿಯು ಭದ್ರತೆಗಾಗಿ ಭದ್ರತಾ ಶೇವಣಿಯನ್ನು ವಸೂಲು ಮಾಡುವುದು ಅಗತ್ಯವಾಗಿದೆ. ಗ್ರಾಹಕರಿಗೆ ಇದು ಹೊರೆ ಅಥವಾ ತೊಂದರೆ ಎಂದು ಭಾವಿಸಲಾಗದು.

ಇ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.